ಮೀನುಗಾರರಿಗೆ ಪರಿಹಾರ ನಿಧಿ

214 (502) ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೀನುಗಾರರು ಆಕಸ್ಮಾತ್ ಮೃತಪಟ್ಟರೆ ದುರ್ಘಟನೆಗೆ ಈಡಾದರೆ ಅವರಿಗೆ ಸಿಗುವ ಸೌಲಭ್ಯಗಳಾವುವು;

ಆ) ಮೀನುಗಾರ ಸಂಘದ ಸದಸ್ಯನಲ್ಲದ ಮೀನುಗಾರರಿಗೆ ಸಿಗುವ ಸೌಲಭ್ಯಗಳಾವುವು;

ಇ) ಸಂಕಷ್ಟ ಪರಿಹಾರ ನಿಧಿಯಿಂದ ಪರಿಹಾರ ಪಡೆಯಲಿ ಯಾವ ಕ್ರಮ ಅನುಸರಿಸಬೇಕು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ನೈಸರ್ಗಿಕ ವಿಕೋಪಗಳಿಂದ ಹಾಗೂ ಇನ್ನಿತರ ಅನಾಹುತ ಗಳಿಂದ ಮೀನುಗಾರರು ಮೃತಪಟ್ಟಲ್ಲಿ ಅವರ ವಾರಸುದಾರರಿಗೆ

1) ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಗರಿಷ್ಟ 25,000-00 ರೂ.

2) ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ಗರಿಷ್ಟ 35,000-00 ರೂ. ಹಾಗೂ

3) ಮೀನುಗಾರರ ಸಾಮಾಜಿಕ ಸುರಕ್ಷಾ ಜೀವ ವಿಮಾ ಯೋಜನೆಯಡಿಯಲ್ಲಿ ಗರಿಷ್ಟ ರೂ. 50,000-00 ಗಳ ಪರಿಹಾರ ನೀಡುವ ಸೌಲಭ್ಯಗಳಿವೆ.

ಆ) ಮೀನುಗಾರರ ಸಹಕಾರ ಸಂಘದ ಸದಸ್ಯನಲ್ಲದ ಮೀನುಗಾರರಿಗೆ ಅವರ ತುರ್ತು ಪರಿಸ್ಥಿತಿಗಳಲ್ಲಿ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಮಾತ್ರ ಪರಿಹಾರ ಪಡೆಯುವ ಸೌಲಭ್ಯವಿರುತ್ತದೆ.

ಇ) ಸಂಕಷ್ಟಕ್ಕೊಳಗಾದ ಮೀನುಗಾರರು ದುರ್ಘಟನೆಯ ವಿವರಗಳನ್ನು ಕೂಡಲೇ ತಮ್ಮ ಪ್ರದೇಶಗಳಿಗೆ ಸಂಬಂದಿಸಿದ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳ ಗಮನಕ್ಕೆ ತಂದು ಅವರಿಂದ ಪ್ರಕರಣದ ಮಹಜರ್ ನಡೆಸಬೇಕು. ಪ್ರಕರಣಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳೊಂದಿಗೆ ಪರಿಹಾರಕ್ಕಾಗಿ ಅರ್ಜಿಯನ್ನು ಅವರ ಮೂಲಕ ಸಂಬಂಧಿಸಿದ ಮೀನುಗಾರಿಕೆ ಉಪನಿರ್ದೇಶಕರವರಿಗೆ ಕಳುಹಿಸಿ ಕೊಡಬೇಕಾಗಿದ್ದು ಮೀನುಗಾರಿಕೆ ಉಪ ನಿರ್ದೇಶಕರವರು ಅದನ್ನು ತಮ್ಮ ಷರಾದೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುತ್ತಾರೆ ಮೀನುಗಾರರ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸಮಿತಿಯ ಸದಸ್ಯ ಕಾರ್ಯದರ್ಶಿಯವರಾದ ಮೀನುಗಾರಿಕೆ ನಿರ್ದೇಶಕರವರೇ ಸಮಿತಿಯ ಪೂರ್ವಾನುಮತಿ ನಿರೀಕ್ಷಿಸಿ ಮಂಜೂರು ಮಾಡುತ್ತಾರೆ. ಉಳಿದ ಪ್ರಕರಣಗಳನ್ನು ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು ಅಧ್ಯಕ್ಷರಾಗಿರುವ ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸಮಿತಿಯ ಸಭೆಯಲ್ಲಿ (3 ತಿಂಗಳಿಗೊಮ್ಮೆ ಸಭೆ ನಡೆಸುತ್ತದೆ) ಇತ್ಯರ್ಥ ಪಡಿಸಲಾಗುವುದು.